# ಕರ್ನಾಟಕ ವಿಧಾನ ಪರಿಷತ್ತು

1] ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 962

2] ಮಾನ್ಯ ಸದಸ್ಯರ ಹೆಸರು : ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)

3] ಉತ್ತರಿಸುವ ದಿನಾಂಕ : 24.02.2022

4] ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಪೊಲೀಸ್ ಹಾಗೂ ಸಿಬ್ಬಂದಿಯ ವೇತನ ಭತ್ಯೆ ಪರಿಷ್ಕರಣೆ ಸಂಬಂಧ ರಚಿಸಲಾದ ಔರಾದ್ಕರ್ ಸಮಿತಿ ರಚನೆಯ ಉದ್ದೇಶಗಳೇನು; (ಪೂರ್ಣ ವಿವರ ನೀಡುವುದು) | ಕರ್ನಾಟಕ ರಾಜ್ಯ ಪೊಲೀಸ್ ಸಿಬ್ಬಂದಿಯ ಸಂಬಳವನ್ನು ಇತರೆ ರಾಜ್ಯಗಳ ಪೊಲೀಸ್ ಸಿಬ್ಬಂದಿಯೊಂದಿಗೆ ಹೋಲಿಕೆ ಮಾಡಲು ಮತ್ತು ಪೊಲೀಸ್ ಸಿಬ್ಬಂದಿಯ ವೇತನವನ್ನು ಕರ್ನಾಟಕದಲ್ಲಿ ಸರ್ಕಾರದ ಇತರೆ ಇಲಾಖೆಯಲ್ಲಿನ ಅದೇ ಶ್ರೇಣಿಯ ಅಧಿಕಾರಿಯೊಂದಿಗೆ ಸಮತೋಲನಗೊಳಿಸಲು ಮತ್ತು ಸಿಬ್ಬಂದಿ ವೇತನವನ್ನು ಸಮಗ್ರ ರೀತಿಯಲ್ಲಿ ಪರಿಶೀಲಿಸಿ ವೇತನ ಹಾಗೂ ಇತರೆ ಭತ್ಯೆಗಳ ಘೋಷಣೆಗೆ ಸಂಬಂಧಿಸಿದಂತೆ ಸೂಕ್ತ ಶಿಫಾರಸ್ಸುಗಳನ್ನು ಮಾಡಿ ದಿನನಿತ್ಯದ ಕರ್ತವ್ಯಗಳ ನಿರ್ವಹಣೆಯಲ್ಲಿ ಅಪಾಯವನ್ನು ಎದುರಿಸಲು ರಾಜ್ಯ ಪೊಲೀಸ್ ಪಡೆಗಳ ಎಲ್ಲಾ ಸದಸ್ಯರಿಗೆ ನೀಡಬೇಕಾದ ಅಪಾಯದ ಭತ್ಯೆ ಪ್ರಮಾಣವನ್ನು ಹೆಚ್ಚಿಸಲು ರಾಜ್ಯ ಸರ್ಕಾರವು ದಿನಾಂಕ: 28.06.2016 ರಲ್ಲಿ ಶ್ರೀ ರಾಘವೇಂದ್ರ ಔರಾದ್ಕರ್‌ರವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿರುತ್ತದೆ. |
| ಆ. | ಸಮಿತಿ ವರದಿಯ ಶಿಫಾರಸ್ಸುಗಳಾವುವು; (ಪೂರ್ಣ ವಿವರ ನೀಡುವುದು) | ಅನುಬಂಧ–ಅ ರಲ್ಲಿ ಉತ್ತರಿಸಲಾಗಿದೆ. |
| ಇ. | ಸರ್ಕಾರ ವರದಿಯನ್ನು ಒಪ್ಪಿ, ಯಾವ ಶಿಫಾರಸ್ಸುಗಳನ್ನು ಎಂದಿನಿಂದ ಜಾರಿಗೊಳಿಸಲಾಗಿದೆ; (ಪೂರ್ಣ ವಿವರ ನೀಡುವುದು) | ಅನುಬಂಧ–ಆ ರಲ್ಲಿ ಉತ್ತರಿಸಲಾಗಿದೆ. |
| ಈ. | ಔರಾದ್ಕರ್ ವರದಿ ಆಧರಿಸಿ, ಸರ್ಕಾರ ಜಾರಿಗೊಳಿಸಿದ ಆದೇಶದಿಂದ ಇಲಾಖೆಯಲ್ಲಿ ಸೇವಾ ನಿರತ 7–8 ವರ್ಷ ಸೇವೆ ಸಲ್ಲಿಸಿದ ಪೊಲೀಸ್ ಹಾಗೂ ಸಿಬ್ಬಂದಿಗಳು ಯಾವುದೇ ಸೌಲಭ್ಯ ಇಲ್ಲದೆ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಪತ್ರ ಸಂಖ್ಯೆ: ಆಇ 9 ಎಸ್‌ಆರ್‌ಪಿ 2019, ದಿನಾಂಕ: 18.09.2019 ರಲ್ಲಿ ವೇತನ ನಿಗದಿ ಕುರಿತಂತೆ ಹಾಗೂ ಸದರಿ ಪರಿಷ್ಕರಣೆಯು ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳ ನಿಯಮ 43 ರಡಿ ಪುನರ್ ನಿಗದಿಪಡಿಸುವಂತೆ ಸ್ಪಷ್ಟವಾಗಿ ಸೂಚಿಸಲಾಗಿರುತ್ತದೆ. |
| ಉ. | ಬಂದಿದ್ದಲ್ಲಿ, ಸದರಿ ತಾರತಮ್ಯ ಸರಿಪಡಿಸಲು ಸರ್ಕಾರ ಯಾವ ಕ್ರಮವನ್ನು ಯಾವ ಕಾಲಮಿತಿಯಲ್ಲಿ ಕೈಗೊಳ್ಳಲಾಗುವುದು? | |

**ಸಂಖ್ಯೆ: ಹೆಚ್‌ಡಿ 22 ಇಎಫ್‌ಎಸ್ 2022**

[ಆರಗ ಜ್ಞಾನೇಂದ್ರ]
ಗೃಹ ಸಚಿವರು

## ಅನುಬಂಧ–'ಅ'

ಕರ್ನಾಟಕ ಪೊಲೀಸ್ ಇಲಾಖೆಯ ವೃಂದದ ಹುದ್ದೆಗಳ ವೇತನ ಶ್ರೇಣಿಗಳಿಗೂ ಇತರೆ ಇಲಾಖೆಯ ವೇತನ ಶ್ರೇಣಿಗಳಿಗಳು ಬಹಳಷ್ಟು ತಾರತಮ್ಯ ಇದ್ದುದರಿಂದ, ಈ ವೇತನ ಶ್ರೇಣಿಯ ತಾರತಮ್ಯವನ್ನು ಸಮತೋಲನಗೊಳಿಸುವುದು ಪೊಲೀಸ್ ಇಲಾಖೆಯ ಸಿಬ್ಬಂದಿಗಳ ಬೇಡಿಕೆಯಾಗಿತ್ತು. ಈ ವೇತನ ಶ್ರೇಣಿ ತಾರತಮ್ಯವನ್ನು ಸಮತೋಲನಗೊಳಿಸುವ ಸಲುವಾಗಿ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯವರುಗಳ ವೇತನಶ್ರೇಣಿಯ ಪರಿಷ್ಕರಣೆಯ ಕುರಿತು ರಾಜ್ಯ ಸರ್ಕಾರವು, ದಿನಾಂಕ:28.06.2016 ರಲ್ಲಿ ಶ್ರೀ ರಾಘವೇಂದ್ರ ಔರಾದ್ಕರ್‌ರವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿರುತ್ತದೆ. ಸರ್ಕಾರದ ಆದೇಶದಂತೆ ರಾಘವೇಂದ್ರ ಔರಾದ್ಕರ್ ಸಮಿತಿಯು ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಯವರುಗಳ ವೇತನ ಪರಿಷ್ಕರಣೆ ಸಂಬಂಧಿಸಿದಂತೆ ಈ ಕೆಳಕಂಡ ಶಿಫಾರಸ್ಸುಗಳೊಂದಿಗೆ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತದೆ;

| Sl. No. | Rank | Existing scale | Proposed scale | Raise in Levels |
|---|---|---|---|---|
| 1 | Follower | 10400-16400 | 11000-19000 | One Level |
| 2 | Jamedar Follower | 11600-21000 | 12500-24000 | Two Levels |
| 3 | Police Constable | 11600-21000 | 12500-24000 | One Level |
| 4 | Head Constable | 12500-24000 | 14550-26700 | Two Levels |
| 5 | Asst. Sub Inspector | 14550-26700 | 20000-36300 | Three Levels* |
| 6 | Police Sub Inspector | 20000-36300 | 22800-43200 | Two Levels |
| 7 | Police Inspector | 21600-40050 | 28100-50100 | Four Levels* |
| 8 | Dy. Supdt. of Police | 28100- 50100 | 30400-51300 | One Level |
| 9 | Superintendent of Police | 36300-53850 | 40050-56550 | Two Levels |

ಶ್ರೀ ರಾಘವೇಂದ್ರ ಔರಾದ್ಕರ್ ಸಮಿತಿಯು ಪೊಲೀಸ್ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಯವರುಗಳ ಸಮವಸ್ತ್ರ ಭತ್ಯೆ, ಸಾರಿಗೆ ಭತ್ಯೆ, ಕಷ್ಟ ಪರಿಹಾರ ಭತ್ಯೆ, ಗಂಡಾಂತರ ಭತ್ಯೆ, ಶ್ರಮದಾನ ಭತ್ಯೆ ಹಾಗೂ ಸದೃಢ ಭತ್ಯೆಗಳನ್ನು ಪರಿಷ್ಕರಣೆ ಮಾಡಲು ಶಿಫಾರಸ್ಸು ಮಾಡಿರುತ್ತದೆ.

——

## ಅನುಬಂಧ–'ಆ'

### ಶ್ರೀ ರಾಘವೇಂದ್ರ ಔರಾದ್ಕರ್ ಸಮಿತಿ ವರದಿಯ ಅನುಷ್ಠಾನ ಜಾರಿಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳ ಬಗ್ಗೆ ಸಂಕ್ಷಿಪ್ತ ಟಿಪ್ಪಣಿ

**ವೇತನ ಶ್ರೇಣಿ ಪರಿಷ್ಕರಣೆಯ ಅನುಷ್ಠಾನ:**

ಶ್ರೀ ರಾಘವೇಂದ್ರ ಔರಾದ್ಕರ್ ವರದಿಯ ಶಿಫಾರಸ್ಸುಗಳನ್ನು ಭಾಗಶಃ ಅಂಗೀಕರಿಸಿದ ರಾಜ್ಯ ಸರ್ಕಾರವು ಆದೇಶ ಸಂಖ್ಯೆ: ಆಇ/9/ಎಸ್ಆರ್‌ಪಿ/2019, ದಿನಾಂಕ: 16.07.2019 ರಲ್ಲಿ ಪೊಲೀಸ್ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಯವರುಗಳ ವೇತನ ಶ್ರೇಣಿಗಳನ್ನು ದಿನಾಂಕ: 01.08.2019 ರಿಂದ ಜಾರಿಗೆ ಬರುವಂತೆ, ಈ ಕೆಳಕಂಡಂತೆ ಪರಿಷ್ಕರಣೆ ಮಾಡಿರುತ್ತದೆ.

| Sl. No. | Rank | Revised Pay Scale (As per 6th Pay Commission) ₹ | Raise in Levels | Total Policemen Benefited |
|---|---|---|---|---|
| 1 | Police Constable | 23,500-47,650 | One Level | 42757 |
| 2 | Head Constable | 27,650-52,650 | Two Level | 27111 |
| 3 | Asst. Sub Inspector | 30,350-58,250 | One Level | 9030 |
| 4 | Police Inspector | 43,100-83,900 | One Level | 1511 |
| 5 | SP (non-IPS) | 70,850-1,07,100 | One Level | 127 |
| | **TOTAL** | | | **80536** |

ಶ್ರೀ ರಾಘವೇಂದ್ರ ಔರಾದ್ಕರ್ ಸಮಿತಿ ವರದಿಯ ಅನುಷ್ಠಾನದಿಂದ ಅನುಯಾಯಿ, ಜಮೇದಾರ್ ಅನುಯಾಯಿ, ಪಿ.ಎಸ್.ಐ ಹಾಗೂ ಪೊಲೀಸ್ ಉಪಾಧೀಕ್ಷಕರುಗಳ ವೇತನ ಶ್ರೇಣಿ ಪರಿಷ್ಕರಣೆಗಳನ್ನು ಹೊರತುಪಡಿಸಿ ಇತರೆ ಎಲ್ಲಾ ವೃಂದದ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯವರುಗಳ ವೇತನ ಶ್ರೇಣಿಗಳು ಪರಿಷ್ಕರಣೆಯಾಗಿ ಅನುಕೂಲವಾಗಿರುತ್ತವೆ.

**ಭತ್ಯೆ ಪರಿಷ್ಕರಣೆ ಅನುಷ್ಠಾನ:**

ಶ್ರೀ ರಾಘವೇಂದ್ರ ಔರಾದ್ಕರ್ ಸಮಿತಿಯು ಪೊಲೀಸ್ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಯವರುಗಳ ಭತ್ಯೆಯನ್ನು ಪರಿಷ್ಕರಿಸುವಂತೆ ಮಾಡಿದ್ದ ಶಿಫಾರಸ್ಸುಗಳನ್ನು ಅಂಗೀಕರಿಸಿದ ಮಾನ್ಯ ಘನ ಸರ್ಕಾರವು, ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯವರುಗಳ ಭತ್ಯೆಗಳನ್ನು ಈ ಕೆಳಕಂಡಂತೆ ಪರಿಷ್ಕರಿಸಿರುತ್ತದೆ;

| ಕ್ರ ಸಂ. | ಸರ್ಕಾರದ ಆದೇಶ ಸಂಖ್ಯೆ ಮತ್ತು ದಿನಾಂಕ: | ಭತ್ಯೆಗಳ ವಿವರ | ಭತ್ಯೆಯ ಮೊತ್ತ |
|---|---|---|---|
| 1 | ಎಫ್.ಡಿ 47 ಎಸ್ಆರ್‌ಪಿ 2016(1), ದಿನಾಂಕ: 21.11.2016 | ಸಮವಸ್ತ್ರ ಭತ್ಯೆ | 500.00 |
| 2 | ಎಫ್.ಡಿ 47 ಎಸ್ಆರ್‌ಪಿ 2016(11), ದಿನಾಂಕ: 21.11.2016 | ಸಾರಿಗೆ ಭತ್ಯೆ | 600.00 |

...2

| | | | |
|---|---|---|---|
| 3 | ಆದೇಶ ಸಂಖ್ಯೆ: ಆಇ 6 ಎಸ್‌ಆರ್‌ಪಿ 2019, ದಿನಾಂಕ: 18.10.2019 | <u>ಕಷ್ಟ ಪರಿಹಾರ ಭತ್ಯೆ</u><br>ಅನುಯಾಯಿ<br>ಪಿ.ಸಿ<br>ಹೆಚ್.ಸಿ<br>ಎ.ಎಸ್.ಐ<br>ಪಿ.ಎಸ್.ಐ<br>ಪಿ.ಐ | <br>2000.00<br>3000.00<br>2000.00<br>2000.00<br>2000.00<br>1000.00 |

ಒಟ್ಟಾರೆಯಾಗಿ ಶ್ರೀ ರಾಘವೇಂದ್ರ ಔರಾದ್ಕರ್ ಸಮಿತಿಯ ಶಿಫಾರಸ್ಸುಗಳ ಅನುಷ್ಠಾನದಿಂದ ಪೊಲೀಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 84773 ಅಧಿಕಾರಿ ಮತ್ತು ಸಿಬ್ಬಂದಿಯವರುಗಳಿಗೆ ಅನುಕೂಲವಾಗಿದೆ.

---